





ಚಂದಿಲ್ಲ ನೋಡ್ರಿ ಎಂದು ಹೇಳಿದೆ. ಅದಕ್ಕೆ ಮತ್ತೊಬ್ಳು, ಅವರ್ಯಾಕ್ ಆತಂಕ ಪಟ್ಕೋತಾರ, ನಮಗ ಮಸಾಜ್ ಮಾಡೋರು ಗಂಡಸರಿದ್ರ ನಮಗ ಬರ್ಲಿಕ್ಕೆ ಬಿಡ್ತಿರಲಿಲ್ಲ ಅಂದ್ಳು. 'ಇರಲಿ, ನಮಗ ಗೊತ್ತಿದ್ದೇ ಅವರನ್ನು ಕರಕೊಂಡು ಬಂದಿವಿ, ಮಸಾಜ್ ಮಾಡಿಸಿಕೊಳ್ಳಿ, ಸುಮ್ನೆ ಕರದು ತೊಂದರೆ ಮಾಡೋದು ಬ್ಯಾಡ' ಎಂದು ಮಾತು ಮುಗಿಸಿದೆ.

ಆದ್ರೂ ಸುಮ್ಮನಿರಲಾಗದೆ ಗಂಡಸರೆಲ್ಲ ಎಲ್ಲಿ ಎಂದು ನಮಗೆ ಮಸಾಜ್ ಮಾಡುತ್ತ ಇರೋ ಚಿಕ್ಕಕಣ್ಣಿನ ಸುಂದರಿಯನ್ನು ಕೇಳ್ದೆ, ಆ ಕಡೆ ಕೈ ಮಾಡಿ ತೋರಿಸಿದ್ಳು. ಅಲ್ಲೆ ಪಕ್ಕದಲ್ಲಿದ್ದ ಪರದೆ ಒಳಗೆ ಅವರೆಲ್ಲ ಇದ್ರು. ಕರೆದಾಗ ಓ ಅನ್ನದಷ್ಟು ದೂರವೇನು ಇರಲಿಲ್ಲ. ಬೇಕೆಂದೇ ನಮ್ಮ ಶಬ್ದಕ್ಕೆ ಉತ್ತರಿಸ್ತಿಲ್ಲ ಎಂದು ತಿಳಿದು 'ಹೆಂಗೂ ಬರತಾರಲ್ಲ ಹೊರಗೆ' ಎಂದು ಹಲ್ಲು ಮಸೆಯುತ್ತ ಮತ್ತೆ ನಮ್ಮ ಮಂಚಕ್ಕೆ ಬಂದೆವು.

ಮತ್ತೆ ಮಸಾಜ್ ಶುರುವಾಯಿತು. ಕತ್ತು ಭುಜ, ಬೆನ್ನು ಕಾಲುಗಳನ್ನು ನೀವುತ್ತ ನಮ್ಮನ್ನು ರಿಲ್ಯಾಕ್ಸ್ ಆಗಿಸಲು ಚಿಕ್ಕಕಣ್ಣಿನ ಲಲನೆಯರು ಪ್ರಯತ್ನಿಸುತಿದ್ದರು. ಎಲ್ಲರ ದೇಹ ಇಲ್ಲಿದ್ರೂ ಮೆದುಳು ತಮ್ಮ ತಮ್ಮ ಗಂಡಂದಿರ ಕಡೆ. ತಮಗೆ ಮಾಡುತ್ತಿರುವುದೆಲ್ಲ ಅವರಿಗೆ ಮಾಡುತ್ತಿರುವಂತೆ ಊಹಿಸಿಕೊಂಡು ಅದೆಷ್ಟು ಉರಿ. ರಿಲ್ಯಾಕ್ಸ್ ಆಗುವ ಬದಲು ಕೊಲ್ಯಾಪ್ಸ್ ಆಗೊ ಹಂಗೆ ಟೆನ್ಷನ್ ಮಾಡಿಕೊಳ್ಳತಿದ್ರು. ಇದು ಗೊತ್ತಿದ್ದೆ ಗಂಡಸ್ರು ತಮ್ಮ ಹೆಂಡತಿಯರಿಗೆ ಕರೆದುಕೊಂಡು ಬರಲು ಹಿಂದೇಟು ಹಾಕತಿದ್ರು. ಈಗ ಅನುಭವಿಸಿ ಎಂದು ಖುಷಿ ಪಡುತಿರಬಹುದು ಎಂದನಿಸಿತು.

ಮಸಾಜ್ ಅವಧಿ ಒಂದು ಗಂಟೆಗೆ ಇಂತಿಷ್ಟು ದುಡ್ಡು ಎಂದು ನಿಗದಿ ಮಾಡಲಾಗುತ್ತದೆ. ನಮ ಗೈಡ್ ಒಂದು ಗಂಟೆಯ ಅವಧಿಯ ಮಸಾಜ್ ಪರಿಣಾಮಕಾರಿ ಆಗಿರೋದಿಲ್ಲ. ದೇಹದ ಮೇಲೆ ಮಸಾಜ್‌ನ ಪರಿಣಾಮ ಆಗ್ಬೇಕಾದ್ರೆ ಎರಡು ಗಂಟೆಯಾದ್ರೂ ಮಸಾಜ್ ಅವಶ್ಯಕ ಎಂದು ಹೇಳಿದಕ್ಕೆ ಎರಡು ಗಂಟೆ ಮಸಾಜ್ ಸಮಯ ನಿಗದಿಮಾಡಿದ್ದೆವು. ನಮಗೂ ಕೈಕಾಲು, ಸೊಂಟ ನೋವು ಮಸಾಜ್‌ನಿಂದ ಕಡಿಮೆ ಆಗಬಹುದು ಎಂಬ ಆಸೆಗೆ ಎರಡು ಗಂಟೆ ಅಂದ್ರೂ ಒಪ್ಪಿದೆವು.

ಯಾಕೋ ಎಲ್ಲಾ ಹೆಂಗಳೆಯರು ಮಂಕಾಗಿದ್ದಂತೆ ಅನಿಸಿ ಮಾತಾಡಿಸಲು ಪ್ರಯತ್ನಿಸಿದೆ. ಸಮಯ ನೋಡಿದ್ರೆ ಇನ್ನೂ ಒಂದು ಗಂಟೆ ಬಾಕಿ ಇತ್ತು. ಮನಸ್ಸಿಗೆ ಆಹ್ಲಾದ ನೀಡೋ ಮಸಾಜ್ ನಮ್ಮ ತಪ್ಪುಕಲ್ಪನೆಗಳಿಂದ ಅಸಹನೆ ಮೂಡಿಸುತಿತ್ತು. ಚಿಕ್ಕ ಕಣ್ಣುಗಳ ಲಲನಾಮಣಿಯರು ಮಂದಹಾಸದಿಂದ ತಮ್ಮ ಕರ್ತವ್ಯ ನಿರ್ವಹಿಸುತಿದ್ದರು. ಮಸಾಜ್‌ನ ಕೊನೆಯ ಭಾಗವಾಗಿ ಬೆನ್ನ ಹಿಂದೆ ಬಂದು ತಮ್ಮ ಎರಡೂ ಕೈಗಳಿಂದ ಎದೆಯ ಭಾಗ ನೀವುತ್ತ ತಮ್ಮ ಕೈಗಳನ್ನು ನಮ್ಮ ಕೊರಳಿಗೆ ಹಾರವಾಗಿ ಹಾಕಿ ತಮ್ಮ ಮುಖವನ್ನು ನಮ್ಮ ಕತ್ತಿನ ಹತ್ತಿರ ತಂದು ಎದೆ ಮತ್ತು ಪಕ್ಕೆಲುಬು ನೀವತೊಡಗಿದಾಗ ದೇಹದ ಎಲ್ಲಾ ಭಾಗಗಳು ಹಗುರವಾದ ಅನುಭವ. ಮೂಳೆಗಳನ್ನು ತಮ್ಮ ಕೈಯಿಂದ ನೀವಿದಾಗ ಆಗುವ ಘರ್ಷಣೆಯಿಂದ ಜಡ್ಡುಗಟ್ಟಿದ ದೇಹ ಹಗುರಾಗದೇ ಇರದು. ಆದರೆ ಯಾವಾಗ ಈ ಕೊರಳಿಗೆ ಹಾರ ಆಗುವ ಭಂಗಿಯಿಂದ ಮಸಾಜ್ ಮಾಡತೊಡಗಿದರೋ ನಮ್ಮಲ್ಲಿ ಒಬ್ಬಳಿಗೆ ತಡೆಯಲು ಆಗದೆ ಮಸಾಜ್ ಮಾಡುವವಳಿಗೆ ನೂಕಿ ದಿಗ್ಗನೆದ್ದು ತನ್ನ ಗಂಡನಿದ್ದ ಕೊಠಡಿಯೆಡೆ ಓಡಿದಳು. ಮೆಲ್ಲನೆ ಪರದೆ ಸರಿಸಿ ಇಣುಕಿದಾಗ ಅಲ್ಲೂ ಅದೇ ದೃಶ್ಯ. ಮಸಾಜ್ ಲಲನಾಮಣಿ ತನ್ನ ಗಂಡನ ಕೊರಳಿಗೆ ತೋಳಿನ ಹಾರ ಹಾಕಿ ಮಸಾಜ್ ಮಾಡುವ ಭಂಗಿ ನೋಡಿ ಸಿಟ್ಟಿನಿಂದ ಅವಳನ್ನು ಎಳೆದು ಬಿಟ್ಟಳು.



ಅವಳು ದಿಗ್ಗನೆದ್ದು ಓಡಿದ್ದು ನೋಡಿ ಎಲ್ಲರೂ ಅವಳ ಬೆನ್ನತ್ತಿದ್ದೆವು. ಎಲ್ಲರೂ ಪರದೆ ಇಣುಕಿ ನೋಡಿದಾಗ ಎಲ್ಲಾ ಗಂಡಂದಿರ ಹಿಂದೆ ತೋಳು ಹಾರ ಹಾಕಿ ನಿಂತ ಲಲನಾಮಣಿಯರು. ಹೀಗೆ ಎಲ್ಲರೂ ಒಮ್ಮೆಗೆ ಓಡಿ ಬಂದದ್ದರಿಂದ ಅವರಿಗೆಲ್ಲ ಗಲಿಬಿಲಿಯಾಯಿತು. ಸುಸೂತ್ರವಾಗಿ ಮುಗಿಯಬೇಕಿದ್ದದ್ದು ಹೀಗೆ ಗಲಿಬಿಲಿ ಎಬ್ಬಿಸಿದ್ದಕ್ಕೆ ಅವರೆಲ್ಲರ ಮುಖದ ಮೇಲೆ ಅಸಮಾಧಾನದ ಗೆರೆಗಳಿದ್ದವು. ಮಸಾಜ್ ಲಲನಾಮಣಿಯರು ನಮ್ಮನ್ನು ನೋಡಿ ಮುಸಿಮುಸಿ ನಗುತ್ತ ನಿಂತರು. ಎರಡು ಗಂಟೆ ಎರಡು ಕ್ಷಣದಂತೆ ಕಳೆದ ಗಂಡಸರಿಗೆ ಅದೇ ಎರಡು ಗಂಟೆ ಯುಗಗಳಂತೆ ಕಳೆದ ನಮ್ಮ ಮನಸ್ಥಿತಿ ಬಗ್ಗೆ ಅರಿವಿರಲಿಲ್ಲ.

ಮಸಾಜ್ ಮಾಡಿಸಿಕೊಂಡ ಖುಷಿಯಲ್ಲಿ ಗಂಡಸರೆಲ್ಲ ಪ್ರಸನ್ನವದನರಾಗಿದ್ದರು. ನಮ್ಮ ಬಗ್ಗೆ ಹೆಚ್ಚಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ಹೋಗುವಾಗ ಎಲ್ಲಾ ಮಸಾಜ್ ಲಲನಾಮಣಿಯರಿಗೆ ಥ್ಯಾಂಕ್ಸ್ ಹೇಳಿ ತಮ್ಮ ಕೃತಜ್ಞತೆ ಅರ್ಪಿಸಿದರು. ಆ ಎಲ್ಲಾ ಲಲನಾಮಣಿಯರು ನಮ್ಮ ದಪ್ಪ ಮುಖದ ಕಡೆ ನೋಡುವ ಪ್ರಯತ್ನ ಮಾಡದೆ ತಮ್ಮಿಂದ ಸಂತುಷ್ಟರಾದವರ ಕಡೆಗೆ ನೋಡುತ್ತ ಮುಗುಳು ನಗುತ್ತಿದ್ದರು. ನಾವೂ ಅವರಿಗೆ ಥ್ಯಾಂಕ್ಸ್ ಹೇಳಿದೆವು. ಅವರು ಅದಕ್ಕೆ ಪ್ರತಿಕ್ರಿಯಿಸುವ ಗೋಜಿಗೂ ಹೋಗಲಿಲ್ಲ. ಹೊರಗೆ ಬಂದಾಗ ಯಾಕೋ ಇಡೀ ಥಾಯ್ಲೆಂಡ್ ಮೇಲೆ ಕೋಪಗೊಂಡೆವು. ಇದಾವದರ ಪರಿವೆ ಇಲ್ಲದೆ ಗಂಡಸರೆಲ್ಲ ಹುರುಪಿನಿಂದ ನಡೆಯುತ್ತಿದ್ದರು. ಅದರಲ್ಲಿ ಯಾರೋ ಒಬ್ರು ಹಾಡುತಿದ್ರು, ಥೈ ಥೈ ಥೈ ಥೈ ಬಂಗಾರಿ...!

ಪ್ರತಿಕ್ರಿಯಿಸಿ: **feedback@sudha.co.in**